# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 19 ವಿಎಸ್‌ಸಿ 2016

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:11-04-2016

## ಅಧಿಸೂಚನೆ

ವಿಷಯ: ಸೋಲಾರ್ ಪಾರ್ಕ್‌ನಲ್ಲಿ ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ: 14.10.2015.

2. ಸರ್ಕಾರದ ಸೇರ್ಪಡೆ ಅಧಿಸೂಚನೆ ಸಂಖ್ಯೆ: ಇಎನ್ 19 ವಿಎಸ್‌ಸಿ 2016 ದಿನಾಂಕ: 02.02.2016

........

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ: 14.10.2015ರಲ್ಲಿ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ನಾಗಲಮಡಿಕೆ ಹೋಬಳಿಯ ವ್ಯಾಪ್ತಿಯಲ್ಲಿ ಸೋಲಾರ್ ಪಾರ್ಕ್ ಸ್ಥಾಪಿಸಲು ಅಧಿಸೂಚನೆ ಹೊರಡಿಸಿರುತ್ತದೆ.

ಸರ್ಕಾರವು ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ: 14.10.2015ಅನ್ನು ಮುಂದುವರೆಸುತ್ತಾ, ಸೇರ್ಪಡೆ ಅಧಿಸೂಚನೆ ಸಂಖ್ಯೆ: ಇಎನ್ 19 ವಿಎಸ್‌ಸಿ 2016 ದಿನಾಂಕ: 02.02.2016 ರನ್ವಯ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ನಾಗಲಮಡಿಕೆ ಹೋಬಳಿಯ ವಲ್ಲೂರು, ಬಳಸಮುದ್ರ, ಕ್ಯಾತಗಾನಚರ್ಲು, ರಾಯಚರ್ಲು ಮತ್ತು ತಿರುಮಣಿ ಗ್ರಾಮಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಸೋಲಾರ್ ಪಾರ್ಕಿನ ವ್ಯಾಪ್ತಿಯಲ್ಲಿ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಬಳಸುವ ಜಮೀನುಗಳನ್ನು ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ 2015 ರೊಂದಿಗೆ ಓದಿಕೊಂಡಂತೆ ಕರ್ನಾಟಕ ಭೂಕಂದಾಯ ಅಧಿನಿಯಮ, 1964 ರ 95(10) ಪ್ರಕರಣ, (2015 ರ ಕರ್ನಾಟಕ ಅಧಿನಿಯಮ, ಸಂಖ್ಯೆ: 31)ರ ಅಡಿಯಲ್ಲಿ ಸೌರ ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ದಾಖಲೆಗಳೊಂದಿಗೆ, ಭೂ ಪರಿವರ್ತನೆ ಶುಲ್ಕ ಮತ್ತು ಅನ್ವಯಿಸುವ ಇತರೆ ಎಲ್ಲಾ ಶುಲ್ಕಗಳನ್ನು ಪಾವತಿಸಿ ಅರ್ಜಿ ಸಲ್ಲಿಸಿದಲ್ಲಿ, ಅಂತಹ ಭೂಮಿಯು ಸೌರ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಭೂ ಪರಿವರ್ತನೆಗೊಂಡಿದೆ ಎಂದು ಪರಿಭಾವಿಸತಕ್ಕದ್ದೆಂದು ನಮೂದಿಸಿ ಸರ್ಕಾರವು ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಅಧಿಸೂಚನೆ ಹೊರಡಿಸಲಾಗಿದೆ.

ಪ್ರಸ್ತುತ ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ: 14.10.2015 ಹಾಗೂ ಸೇರ್ಪಡೆ ಅಧಿಸೂಚನೆ ಸಂಖ್ಯೆ: ಇಎನ್ 19 ವಿಎಸ್‌ಸಿ 2016 ದಿನಾಂಕ: 02.02.2016ಅನ್ನು ಮುಂದುವರೆಸುತ್ತಾ, ಈ ಅಧಿಸೂಚನೆಯ **ಅನುಬಂಧದಲ್ಲಿ** ಉಲ್ಲೇಖಿಸಿರುವಂತೆ ಪಾವಗಡ ತಾಲ್ಲೂಕಿನ ನಾಗಲಮಡಿಕೆ ಹೋಬಳಿಯ ವಲ್ಲೂರು, ಬಳಸಮುದ್ರ, ಕ್ಯಾತಗಾನಚರ್ಲು, ರಾಯಚರ್ಲು ಮತ್ತು ತಿರುಮಣಿ ಗ್ರಾಮಗಳಲ್ಲಿನ ಭೂಮಿಯನ್ನು(ಸರ್ವೆ ನಂಬರ್ ಸಹಿತ), ಉದ್ದೇಶಿತ ಸೋಲಾರ್ ಪಾರ್ಕ್‌ಗೆ ಸೇರ್ಪಡಿಸಿ, ಸೌರ ವಿದ್ಯುತ್ ಘಟಕಗಳ ಸ್ಥಾಪನೆಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ದಾಖಲೆಗಳೊಂದಿಗೆ, ಭೂ ಪರಿವರ್ತನೆ ಕೋರಿ ಅರ್ಜಿ ಸಲ್ಲಿಸಿದಲ್ಲಿ ಸದರಿ ಭೂಮಿಗಳೂ ಸಹ ಸೌರ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಭೂ ಪರಿವರ್ತನೆಗೊಂಡಿವೆ ಎಂದು ಪರಿಭಾವಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿಶ್ವನಾಥ ಪಿ. ಹಿರೇಮಠ)
ಸರ್ಕಾರದ ಉಪ ಕಾರ್ಯದರ್ಶಿ
ಇಂಧನ ಇಲಾಖೆ.

**ಇವರಿಗೆ,**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ವಿಶೇಷ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ, 100 ಪ್ರತಿಗಳನ್ನು ಇಂಧನ ಇಲಾಖೆ, ವಿಕಾಸಸೌಧ, ಇಲ್ಲಿಗೆ ಸರಬರಾಜು ಮಾಡತಕ್ಕದ್ದು.